# ಸಿನಿಮಾ



ಸಿನಿಮಾದೊಳಗೊಂದು ಸಿನಿಮಾ
ಕಾಣುತ್ತದೆ
ನಮ್ಮ ಕಣ್ಣಿನೊಳಗೆ ಇನ್ನೊಂದು
ಒಳಗಣ್ಣು ಕಾಣುವಂತೆ
ಎರಡು ಬೇರೆ ಬೇರೆ ಎನ್ನುವಂತಿಲ್ಲ
ಕಣ್ಣಿನ ಅರ್ಥ ಒಂದೇ ಆದರೂ
ನೋಟವೂ ಬೇರೆ

ಸಿನಿಮಾದಲ್ಲಿ
ನಾಯಕನ ಎದುರು ಖಳನಾಯಕ
ದೂರದಲ್ಲಿ ಮಿಡಿಲಂಗದ ನಾಯಕಿ
ಹಸಿ ನಗುವಿನ ವಿದೂಷಕ
ಬಿಳಿಯ ತಲೆಗೆ ಕಪ್ಪು ರಂಗು
ಮೆತ್ತಿಕೊಂಡು ಕಿಲಕಿಲ ನಗುವ
ಅರವತ್ತರ ಪ್ರಾಯದ ಕಲಾವಿದರು

ಇಷ್ಟು ಮಾತ್ರಕ್ಕೆ ಸಿನಿಮಾ ಮುಗಿದಿಲ್ಲ
ನಾಯಕನ ಹಿಂದೆ ಕೊಡೆ ಹಿಡಿದ
ಎತ್ತರದ ಮನುಷ್ಯ ಉಳಿಯುವನು
ಕಿತ್ತಳೆ ಬಣ್ಣದ ಬೆಳಕು
ಹಾಯಿಸುವ ಲೈಟ್ ಬಾಯ್ ಈಗಷ್ಟೆ
ನಿದ್ದೆ ಹೋಗಿದ್ದಾನೆ ಎಲ್ಲ ಬಲ್ಬುಗಳನ್ನು
ಎಚ್ಚರದಲ್ಲಿಟ್ಟು

ಮೇಕಪ್ಪಿನವನು ಬಟವಾಡೆಗೆ
ಹಲ್ಲು ಗಿಂಜುತ್ತಾ
ನಿರ್ಮಾಪಕನ ಚಿನ್ನದುಂಗುರದ ಬೆರಳನ್ನೆ
ದಿಟ್ಟಿಸುವಾಗ
ಖಚಿತವಾದ ಫ್ರೇಮಿನ ಗುಂಗಿನಲ್ಲಿ
ಮುಳುಗಿದ್ದ ನಿರ್ದೇಶಕನಿಗೆ ಮತ್ತೇನೋ
ನೆನಪಾಗಿ ಸೂರ್ಯಾಸ್ತವನ್ನು ಕಂಡ ಕ್ಷಣ
'ಆಕ್ಷ್ಯನ್' ಎನ್ನುವ ಸದ್ದು ಕ್ಯಾಮೆರಾದ
ಕಣ್ಣಿನೊಳಗೆ
ನಮ್ಮ ಕಣ್ಣಿನೊಳಗೆ ಬೇರೆಯದೆ ಸಿನಿಮಾ

● **ಶಶಿ ತರೀಕೆರೆ**